## ಪ್ರೀತಿಯ ಒಳಗುಟ್ಟು!

ನಮ್ಮ ಮನೆಯ ಪಕ್ಕದಲ್ಲಿ ಮಧ್ಯಮ ವರ್ಗದವರ ಒಂದು ವಠಾರ ಇದೆ. ಅಲ್ಲಿರುವ ಒಬ್ಬ ಸುಮಾರು ಮೂವತ್ತು ವರ್ಷ ವಯಸ್ಸಿನ ಹೆಂಡತಿಯು ತನ್ನ ಗಂಡನೊಡನೆ ಪಕ್ಕದ ಮನೆಯವರ ಬಗ್ಗೆ ತಿಳಿಸುತ್ತಾ, 'ಪಕ್ಕದ ಮನೆಯಾಕೆಗೆ ಎಷ್ಟು ಜಂಬಾ ಗೊತ್ತಾ?' ಎಂದು ಹೇಳುತ್ತಾ ಮುಂದುವರಿಸಿ, 'ಅವಳ ಗಂಡ ಅವಳನ್ನು ಹೂವಿನ ಮಧ್ಯೆಯೇ ಇರಿಸಿಕೊಂಡು ಜೋಪಾನವಾಗಿ ನೋಡಿಕೊಳ್ಳುತ್ತಾನಂತೆ' ಎಂದು ಅಳುವ ಸ್ವರದಲ್ಲಿ ಸಂಭಾಷಣೆಯನ್ನು ಮುಂದುವರಿಸಿ, 'ನೀವೂ ಇದ್ದೀರಾ... ಒಂದು ದಿನಾನೂ ಈ ರೀತಿ ಪ್ರೀತಿ ತೋರಿಸಿಲ್ಲ... ಬರೀ ವ್ಯವಹಾರ ಅಷ್ಟೇ' ಎಂದು ದೂರಿದಳು.

ಕೂಡಲೇ ಆಕೆಯ ಗಂಡ ತಾಳ್ಮೆಯಿಂದ ನಾಟಕೀಯವಾಗಿ 'ಹೌದಾ ನನ್ನ ಮುದ್ದಿನ ಹೆಂಡತಿ... ಪಕ್ಕದ ಮನೆಯಾಕೆಯ ಗಂಡ ಹೂವಿನ ವ್ಯಾಪಾರಿ. ನಾನಾದರೋ ಮೆಣಸಿನಕಾಯಿ ವ್ಯಾಪಾರಿ. ನಾಳೆಯಿಂದ ನಿನ್ನನ್ನೂ ಮೆಣಸಿನಕಾಯಿಯ ಮಧ್ಯೆ ಕೂರಿಸಿ ಮೆಣಸಿನಕಾಯಿಯಂತೆ ನೋಡಿಕೊಳ್ಳಲೇ?' ಎಂದು ಕೇಳಿದಾಗ, ಹೆಂಡತಿ ಸುಮ್ಮನಾದಳು.

**ಜಯಮಾಲಾ ಪೈ**



---



## ಯಾವುದು ಇಷ್ಟ?

ಗೌರಿ– ಗಣೇಶ ಹಬ್ಬಕ್ಕೆ ಸೀರೆ ಕೊಡಿಸಲು ಬೆಂಗಳೂರಿನ ಚಿಕ್ಕಪೇಟೆಗೆ ಪತ್ನಿ ಜತೆಯಲ್ಲಿ ಹೋಗಿದ್ದೆ. ಪತ್ನಿ ತನಗೆ ಇಷ್ಟವಾದ ಎರಡು ರೇಷ್ಮೆ ಸೀರೆ ಖರೀದಿಸಿ ಬರುವಷ್ಟರಲ್ಲಿ ಮಧ್ಯಾಹ್ನ ಊಟದ ಸಮಯ ಆಗಿತ್ತು.

ಅಲ್ಲಿ ಹಲವು ಹೋಟೆಲ್ ಇರುವುದು ಕಂಡು ಪತ್ನಿಗೆ, 'ನಿನಗೆ ಸಸ್ಯಾಹಾರ ಇಷ್ಟನಾ? ಮಾಂಸಾಹಾರ ಇಷ್ಟನಾ?' ಎಂದು ಕೇಳಿದೆ.

ಆಗ ಪತ್ನಿಯಿಂದ ಬಂದ ಉತ್ತರ: 'ನನಗೆ ವಜ್ರದಹಾರ ಅಥವಾ ಚಿನ್ನದಹಾರ ಅಂದ್ರೆ ತುಂಬಾ ಇಷ್ಟ!'

**ವಿ. ಹೇಮಂತ ಕುಮಾರ್**